ಶ್ರೀ ಆರ್. ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇವೊತ್ತು ವಿದ್ಯುತ್‌ನ ಕೊರತೆಯಿಂದಾಗಿ ಕೈಗಾರಿಕೆ ಮತ್ತು ಕೃಷಿ ತೊಂದರೆಯಲ್ಲಿದೆ. ಆದ್ದರಿಂದ ನಾಲ್ಕು ಬಾರ್ಜ್‌ಮೌಂಟೆಡ್ ಪವರ್‌ಪ್ಲಾಂಟ್ಸ್‌ಗೆ ಸರ್ಕಾರ ಈಗಾಗಲೇ ಮನ್ನಣೆ ಕೊಟ್ಟಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಅದು ಬರುತ್ತದೆ. 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬೇಕು ಎಂಬುದು ಇದರ ಉದ್ದೇಶ. ಅದಕ್ಕೆ ಮೊನ್ನೆಯ ಕ್ಯಾಬಿನೆಟ್‌ನಲ್ಲಿ ಪಿ.ಪಿ.ಎಸ್.ಗೆ ಮಂಜೂರಾತಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇದರಿಂದ ಮೀನುಗಾರಿಕೆಗೆ ಪರಿಣಾಮ ಬೀರುತ್ತದೆಂದು ಹೇಳುತ್ತಿದ್ದಾರೆ. ಆದರೆ ಅವರು ಎಲ್ಲಾ ಕಡೆ ಕ್ಲಿಯರೆನ್ಸ್ ಕೊಡುವುದಕ್ಕಿಂತ ಮೊದಲು ಅವರು ಎನ್‌ವಿರಾನ್‌ಮೆಂಟ್ ಮತ್ತು ಎಕಾಲಜಿ ಇಲಾಖೆಯಿಂದ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. Without those clearances the project cannot take off. ಆದ್ದರಿಂದ, ಮಾನ್ಯ ಸದಸ್ಯರು ಅದರ ಬಗ್ಗೆ ಸಂದೇಹ ಪಡುವ ಅವಶ್ಯಕತೆ ಇಲ್ಲ. ಸದಸ್ಯರೇನು ಮೀನುಗಾರಿಕೆಯ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಜಯರಾಮ ಶೆಟ್ಟಿ : ಅಧ್ಯಕ್ಷರೆ, ತಾವು ಬೆಂಗೇರೆ ಮತ್ತು ತಣ್ಣೀರ್ ಬಾವಿ ಎರಡೂ ಕಡೆ ತಾವು ಅದನ್ನು ಮಾಡುವ ಉದ್ದೇಶವಿದೆಯೇ? ಕೇವಲ ಒಂದು ಕಿಲೋಮೀಟರ್ ಒಳಗಡೆಯೋ ಎರಡು ಕೇಂದ್ರಕ್ಕೆ ತಾವು ಪ್ರಪೋಸ್ ಮಾಡಿದ್ದೀರಾ?ಆ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ? ಅಥವಾ ಅದು ಕೇವಲ ವದಂತಿಯೇ? ಒಂದು ಕಿಲೋಮೀಟರ್‌ನೊಳಗೆ ಎರಡು ಕೇಂದ್ರಗಳನ್ನು ಮಾಡಲು ಬರುವುದಿಲ್ಲ. ತಾವು ಅದಕ್ಕೆ ಹೇಗೆ ಟೆಂಡರ್ ಕರೆದಿದ್ದೀರಿ? ಹೇಗೆ ಅವಕಾಶ ಕೊಟ್ಟಿದ್ದೀರಿ?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, Location I am not able to see. I will inform him.

ಪುತ್ತೂರು ತಾಲ್ಲೂಕು ಬೆಳ್ತಂಗಡಿಯ ನಿವಾಸಿ ಹರೀಶ್ ರೈ ಅಲಿಯಾಸ್ ಪುಟ್ಟೋಡಿ ಎಂಬುವವರು ಮೇ 19ರಂದು ನಿಗೂಢವಾಗಿ ಕಣ್ಮರೆಯಾಗಿರುವುದು.

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನ ಬೆಳ್ತಂಗಡಿಯ ನಿವಾಸಿ, ಬೆಂಗಳೂರಿನ ಆರ್ಥಿಕ ಸಂಸ್ಥೆಯಲ್ಲಿ ಇದ್ದಂಥ ಹರೀಶ್ ರೈ ಅಲಿಯಾಸ್ ಪುಟ್ಟೋಡಿ ಎನ್ನತಕ್ಕವರು ಮೇ 19ರಂದು ನಿಗೂಢವಾಗಿ ಕಣ್ಮರೆಯಾಗಿರುತ್ತಾರೆ. ಆ ವ್ಯಕ್ತಿಯ ಕೊಲೆಯಾಗಿರುವ ಬಗ್ಗೆ ವದಂತಿ ಹಬ್ಬಿರುತ್ತದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟ ಆರೋಪಿಗಳ ತೋಟದಲ್ಲಿ ಎಲುಬಿನ ಚೂರುಗಳನ್ನು ಸಹ ತೆಗೆಯಲಾಗಿದೆ. ಎರಡು ದಿನಗಳ ನಂತರ ಆ ವ್ಯಕ್ತಿಯ ತಾಯಿ ಸುಂದರ್‌ರೈ ಎಂಬುವವರು ಪೋಲೀಸರಿಗೆ ದೂರನ್ನು ನೀಡಿದರು. ಇದರ ಹಿನ್ನೆಲೆ ಏನೆಂದರೆ, ಅವರ ಪ್ರೇಯಸಿಯವರ ಫೋನ್ ಕರೆಯ ಮೇರೆಗೆ ಅವರು ಬೆಂಗಳೂರಿನಿಂದ ದಿವಾಕರ್ ರೈ ಎಂಬುವವರ ಜೊತೆ ಹೋಗಿದ್ದರು, ದಿವಾಕರ್‌ರೈ ಉಪ್ಪಿನಂಗಡಿಯಲ್ಲಿ ಇಳಿದರು, ಇವರು ಮಂಗಳೂರಿಗೆ ಹೋದರು. ಮಂಗಳೂರಿನಿಂದ ಇವರು ನಿಗೂಢ ರೀತಿಯಲ್ಲಿ ಕಣ್ಮರೆಯಾಗಿದ್ದಾರೆ.

ಉಪ್ಪನಂಗಡಿಯ ಪೋಲೀಸರು ಇದರ ಬಗ್ಗೆ ತನಿಖೆಯನ್ನು ಕೈಗೆತ್ತಿಕೊಂಡ ಕಾರಣ ಅದರ ಬಗ್ಗೆ ವಿಶ್ವಾಸವಿಲ್ಲದ ಕಾರಣ ಜನರು ಬಂದ್‌ಗೆ ಕರೆಕೊಟ್ಟರು, ಮತ್ತು ವ್ಯಾಪಕವಾದ ತೊಂದರೆಗಳಾದ ಮೇಲೆ ಇದರ ತನಿಖೆಯನ್ನು ರೌಡಿನಿಗ್ರಹ ದಳಕ್ಕೆ ಹಸ್ತಾಂತರ ಮಾಡಿದರು. ಇದರಲ್ಲಿ ಯಾರು ಸಂಶಯಾಸ್ಪದ ವ್ಯಕ್ತಿಗಳಿದ್ದಾರೋ ಅವರು ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡರು. ಪ್ರಧಾನ ಸಾಕ್ಷಿಧಾರ ದಿವಾಕರ್‌ರೈ ಸಹ ಈಗ ನಾಪತ್ತೆಯಾಗಿದ್ದಾನೆ. ಯಾವ ತೋಟದಿಂದ ಸಂಶಯಾಸ್ಪದವಾದ ಶವದ ಎಲುಬುಗಳನ್ನು ತೆಗೆದಿದ್ದಾರೋ ಆ ತೋಟದಲ್ಲಿದ್ದ ಕೆಲಸಗಾರ ಸಹ ನಾಪತ್ತೆಯಾಗಿದ್ದಾನೆ. ಈ ರೀತಿ ಹಂತ ಹಂತವಾಗಿ ಕೇಸಿನ ಎಲ್ಲಾ ವ್ಯವಸ್ಥೆಗಳು ಮುಚ್ಚುಮರೆಯಾಗುತ್ತಿದೆ. ಇದರ ಬಗ್ಗೆ ಗಮನಸೆಳೆಯುವ ಸೂಚನೆಯನ್ನು ನಾನು ಕೊಟ್ಟಿದ್ದೆ, ಆದರೆ ಕಳೆದ ಎರಡು ವಾರದಿಂದ ಅದಕ್ಕೆ ಅವಕಾಶ ಸಿಕ್ಕಿಲ್ಲ, ಆದ್ದರಿಂದ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈ ಕೇಸಿನ ಬಗ್ಗೆ ತನಿಖೆಗೆ ತೆಗೆದುಕೊಂಡ ತಕ್ಷಣ ಇಲ್ಲಿ ಯಾರು ಪ್ರಮುಖವಾದ ಆರೋಪಿಗಳ ಇದ್ದಾರೋ ಅವರಿಗೂ ಪೋಲೀಸರಿಗೂ ಸಂಬಂಧವಿದೆಯೆಂದು ವ್ಯಾಪಕವಾದ ಪ್ರಚಾರವಾಯಿತು. ಅನಂತರ ದಕ್ಷಿಣ ಕನ್ನಡ ಜಿಲ್ಲೆಯ ಎಸ್.ಪಿ. ಯವರು ಬೇರೆ ಬೇರೆ ರೀತಿಯ ಹೇಳಿಕೆಗಳನ್ನು ಕೊಡಲು ಪ್ರಾರಂಭ ಮಾಡಿದರು. ಪ್ರಾರಂಭದಲ್ಲಿ ಇವನು ದೊಡ್ಡ ರೌಡಿ, ಪರದೇಶಕ್ಕೆ ಹೋಗಿರಬಹುದು ಎನ್ನತಕ್ಕ ವಿಚಾರವನ್ನು ಪತ್ರಿಕೆಗಳಲ್ಲಿ ಹೇಳಿದರು. ಆದರೆ ತೋಟದಲ್ಲಿ ಎಲುಬುಗಳು ಸಿಕ್ಕಿದ ತಕ್ಷಣ, ಇದು ಮನುಷ್ಯರ ಎಲುಬಲ್ಲ ಎಂದು ರಾಸಾಯನಿಕ ತಜ್ಞರು ಹೇಳುವುದಕ್ಕೆ ಬದಲಾಗಿ ಪೋಲೀಸ್ ವರಿಷ್ಠರೇ ಹೇಳುವಂಥ ನಿಲುವನ್ನು ತಾಳಿದರೆ ಇದರಲ್ಲಿ ಸಂಶಯ ಮೂಡುತ್ತದೆ. ನನ್ನ ಕ್ಷೇತ್ರದಲ್ಲಿ ಜನರು ತುಂಬಾ ಭಯಭೀತರಾಗಿದ್ದಾರೆ. ಇಂಥ ಹಲವಾರು ಪ್ರಕರಣಗಳು ನನ್ನ ಕ್ಷೇತ್ರದಲ್ಲಾಗುತ್ತಿದೆ. ಇದರಲ್ಲೇನು ವರಿಷ್ಠ ಅಧಿಕಾರಿಗಳೇ ಶಾಮೀಲಾಗಿದ್ದಾರೆ ಎನ್ನತಕ್ಕ ಭಾವನೆ ಜನರ ಮನಸ್ಸಿನಲ್ಲಿ ಬಂದಿದೆ ಅದನ್ನು ದೂರ ಮಾಡಬೇಕಾಗಿದೆ. ಆದ್ದರಿಂದ ಈ ಪ್ರಕರಣವನ್ನು ರೌಡಿ ನಿಗ್ರಹ ದಳದವರಿಂದ ಸಿ.ಒ.ಡಿಗೆ ಹಸ್ತಾಂತರ ಮಾಡಬೇಕು. ಆ ಮೂಲಕ ಸತ್ಯಾಂಶ ಬಯಲಿಗೆ ಬರಬೇಕು. 75 ದಿವಸಗಳಾದರೂ ಒಬ್ಬ ನಾಪತ್ತೆಯಾದ ವ್ಯಕ್ತಿಯನ್ನು ಗುರುತಿಸಲು ಸಾಧ್ಯವಾಗದಿದ್ದರೆ ಹೇಗೆ?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಈ ಕಾಣೆಯಾಗಿರುವ ಪ್ರಕರಣದಲ್ಲಿ ಸ್ಥಳೀಯ ಡಿವೈಎಸ್‌ಪಿ ಮತ್ತು ಇತರ ಪೋಲೀಸ್ ಅಧಿಕಾರಿಗಳ ಮೇಲೆ ನಂಬಿಕೆಯಿಲ್ಲವಾಗಿ ಕಡೆಗೆ ಅದನ್ನು ದಕ್ಷಿಣ ಕನ್ನಡ ಜಿಲ್ಲೆಯ ಆಂಟಿಫ್ರಾಡ್ ಸ್ಕ್ವಾಡ್‌ಗೆ ವಹಿಸಿದ್ದಾರೆ. ಇದಾದಮೇಲೆ ಅನಾನಿಮಸ್ ಅರ್ಜಿಯೊಂದು ಬಂದಿತ್ತು ಹರೀಶ್ ರೈ ಎಂಬುವರನ್ನು ಕೊಲೆ ಮಾಡಿ ವೀಣಾ ಮತ್ತು ಚಂದ್ರ ಎಂಬುವರ ಅರೇಕನೆಟ್ ಗಾರ್ಡ್‌ನ್‌ನಲ್ಲಿ ಸುಟ್ಟುಹಾಕಿದ್ದಾರೆ ಎಂಬ ಗುಮಾನಿಯ ಮೇಲೆ ಇಡೀ ಜಾಗವನ್ನು ಶೋಧನೆ ಮಾಡಿದಾಗ ಅದೊಂದು ಡಂಪಿಂಗ್ ಗ್ರೌಂಡ್- ಅಲ್ಲಿ ಕೆಲವೊಂದು ಮೂಳೆಗಳು ಸಿಕ್ಕಿವೆ, ಒಂದು ಟೈಟನರಿಸ್ಪ್ ವಾಚ್ ಸಿಕ್ಕಿದೆ. ಇವನ್ನು ಮುಂದಿನ ತನಿಖೆಗಾಗಿ ಫೋರೆನ್ಸಿಕ್ ಲ್ಯಾಬರೇಟರಿಗೆ ಕಳಿಸಿದ್ದಾರೆ. ಈಗ ಮಾನ್ಯ ಸದಾನಂದಗೌಡರು ಸ್ಥಳೀಯವಾಗಿ ಅಲ್ಲಿ ಕೆಲವರು ಶಾಮೀಲಾಗಿದ್ದಾರೆ ಇದನ್ನು ಸಿಒಡಿಗೆ ಒಪ್ಪಿಸಬೇಕು ಎಂದು ಕೇಳುತ್ತಾರೆ. ಸರ್ಕಾರದ ವತಿಯಿಂದ ನಾವಿದನ್ನು ಸಿಒಡಿಗೆ ಒಪ್ಪಿಸುತ್ತೇವೆ.

ಅಧ್ಯಕ್ಷರು : ಪುಟ್ಟಣಯ್ಯನವರೇ ಕಬ್ಬಿನ ಬಗ್ಗೆ ಪ್ರಸ್ತಾಪಿಸಬೇಕಾಗಿರುವ ವಿಚಾರ ಇವತ್ತು ಬೇಡ, ಸೋಮವಾರ, ಮಂಗಳವಾರ ತೆಗೆದುಕೊಳ್ಳೋಣ.

ಹೆಜ್ಜಾಲ ಗೋಲಿಬಾರ ಘಟನೆ ಕುರಿತು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಈ ವರ್ಷದ ಪ್ರಾರಂಭದಲ್ಲಿ ನಡೆದಂತಹ ಹೆಜ್ಜಾಲ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರ ಒಪ್ಪಿಕೊಂಡಿತ್ತು. ಆದರೆ ಆರು ತಿಂಗಳು ಕಳೆದರೂ ಇದುವರೆಗೂ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರುವ ಅಧಿಸೂಚನೆಯಾಗಲಿ ಅಥವಾ ಯಾವ ನ್ಯಾಯಧೀಶರನ್ನು ನೇಮಕ ಮಾಡಿದ್ದಾರೆಂಬ ಬಗ್ಗೆ ಮಾಹಿತಿ ಇಲ್ಲ, ಆರು ತಿಂಗಳಾದರೂ ಅಪರಾಧಿಗಳ ಮೇಲೆ ಚಾರ್ಜ್‌ಶೀಟ್ ಕೂಡ ಹಾಕಿಲ್ಲ. ಏಕೆ? ಇದರಿಂದ ಪೋಲೀಸರು ದಿನಾಬೆಳಗಾದರೆ ಯಾರು ಅಪರಾಧಿಗಳಿದ್ದಾರೆ ಅವರನ್ನು ಹಿಡಿದುಕೊಂಡು ಬರುತ್ತಿದ್ದಾರೆ ನ್ಯಾಯಾಂಗ ತನಿಖೆ ಎಲ್ಲಿ, ಯಾವಾಗ ಕಾರ್ಯಾರಂಭ ಮಾಡುತ್ತದೆಂದು ಸರ್ಕಾರ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಹೆಜ್ಜಾಲ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದಾಗಿ ಹೇಳಿದ್ದು ನಿಜ. ನ್ಯಾಯಾಂಗ ತನಿಖೆಗೆ ಒಪ್ಪಿಸಿಯಾಗಿದೆ, ಜಸ್ಟಿಸ್ ಹಿರೇಮಠ ಅವರನ್ನು ಇದರ ಬಗ್ಗೆ ತನಿಖಾಧಿಕಾರಿಯಾಗಿ ನೇಮಕ ಮಾಡಿದ್ದೇವೆ. ಈ ಬಗ್ಗೆ ಅಧಿಸೂಚನೆ ಹೊರಬಿದ್ದು ಮೂರು ವಾರಗಳಾಯಿತು. ಇನ್ನು ಅವರು ಕೆಲಸಕಾರ್ಯಗಳನ್ನು ಮಾಡುತ್ತಾರೆ. ಇನ್ನು ಅಲ್ಲಿ ಕೇಸ್‌ಗಳನ್ನು ಹಾಕುತ್ತಿರುವ ಬಗ್ಗೆ. ಕೆಲವು ಪ್ರಕರಣಗಳು ಇನ್ನೂ ತನಿಖೆ ಹಂತದಲ್ಲಿವೆ ಕೆಲವೊಂದರಲ್ಲಿ ಅಪರಾಧಿಗಳ ಮೇಲೆ ಕೇಸ್‌ಗಳನ್ನು ಹಾಕುತ್ತಿದ್ದಾರೆ. ಈ ಕೆಲಸ ನಾವು ಮುಂದುವರೆಸುತ್ತಿದ್ದೇವೆ.

ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಅಭಾವ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ಈ ಸದನದಲ್ಲಿ ಹತ್ತಾರು ಬಾರಿ ಶಿಕಾರಿಪುರ ತಾಲ್ಲೂಕಿನಲ್ಲಿ ಇಡೀ ರಾಜ್ಯದಲ್ಲಿ ಎಲ್ಲೂ ಕಣದಷ್ಟು ವಿದ್ಯುತ್ ಅಭಾವ ಕಾಡುತ್ತಿದೆ. ಸಾಗರದಿಂದ ಸೊರಬವರೆಗೆ 110 ಕೆವಿ ಸ್ಟೇಷನ್ ಮಂಜೂರಾಗಿ ಐದು ವರ್ಷವಾಗಿದೆ. ಒಂದಲ್ಲ ಒಂದು ಕಾರಣಕ್ಕೆ ಆ ಕೆಲಸ ಕುಂಟುತ್ತಿದೆ. ಅದು ಮುಗಿದರೆ ಶಿರಾಳಕೊಪ್ಪದ ಅರ್ಧ ಹೋಬಳಿಗೆ ವಿದ್ಯುತ್ ಅನುಕೂಲವಾಗುತ್ತದೆ ಎಂದು ನಾನು ಹತ್ತಾರು ಬಾರಿ ಇಲ್ಲಿ ವಿನಂತಿ ಮಾಡಿದ್ದೆ. ಅರಣ್ಯ ಇಲಾಖೆಯವರಿಂದ ಕ್ಲಿಯರೆನ್ಸ್ ಸಿಗಲಿಲ್ಲ ಅಂದರು, ಕೆಇಬಿ ಚೇರ್ಮನ್‌ಗೆ ಹೇಳಿದೆವು, ಅವರು ದುಡ್ಡು ಕಟ್ಟಿದ್ದಾರೆ ಇಷ್ಟಾದರೂ ಸಹ ಹೋದ ಸಲ ಈ ವರ್ಷದ ಏಪ್ರಿಲ್ ಮೇ ಒಳಗೆ ಮುಗಿಸಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು ಅದನ್ನು ಕಾರ್ಯಗತಗೊಳಿಸಿಲ್ಲ. ನಮ್ಮ ತಾಲ್ಲೂಕಿನ ಜನ ಬೆಳಕಿನಲ್ಲಿರುವುದಕ್ಕೆ ಈ ಸಲ ಮುಗಿಸಿ ಏನಾದರೂ ಮಾಡುವುದಕ್ಕಾಗುತ್ತದೆ? ಜೋಗ್‌ನಿಂದ ಅಷ್ಟು ಹತ್ತಿರದಲ್ಲಿದ್ದರೂ ಈ ದುಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಎರಡನೆಯದು ಶಿಕಾರಿಪುರಕ್ಕೆ 110 ಕೆವಿ ಸ್ಟೇಷನ್ ಹೋದ